ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 27 ॥ ಸಂಚಿಕೆ : 44 ॥ Udp/1263/2015-17 ॥ R.NO.50495/91 ॥ ತಾರೀಕು : 21–11–2017 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ರೋಜರಿ ಸೊಸೈಟಿ ರಜತ ಮಹೋತ್ಸವ ಸಂಭ್ರಮ



"ನಮ್ಮ ಜನರಿಗೆ ಅತ್ಯಂತ ಅನುಕೂಲಕರ ವಾತಾವರಣದಲ್ಲಿ ಸಹಕಾರ ದೊರಕುವುದಿದ್ದರೆ ಅದು ಸಹಕಾರಿ ಸಂಘಗಳಿಂದ ಮಾತ್ರ. ಕರಾವಳಿ ಜಿಲ್ಲೆಯ ಸಹಕಾರ ಕ್ಷೇತ್ರದ ಹಿರಿಮೆ ದೊಡ್ಡದು. ಸೊಸೈಟಿಗಳ ಬೆಳವಣಿಗೆಯಲ್ಲಿ ಗ್ರಾಹಕರ ಪಾತ್ರ ದೊಡ್ಡದು ಎಂದು ರಾಜ್ಯ ಸಹಕಾರ ಮಹಾಮಂಡಳ ಮತ್ತು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಾ.ಎಂ.ಎನ್.ರಾಜೇಂದ್ರ ಕುಮಾರ್ ನುಡಿದರು.

ಆರ್.ಎನ್.ಶೆಟ್ಟಿ ಕಲ್ಯಾಣ ಭವನದಲ್ಲಿ ರೋಜರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ರಜತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಮುಖ್ಯಅತಿಥಿಗಳಾಗಿ ಮಾತನಾಡಿದರು. ರೋಜರಿ ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿಯ ಸಾಧನೆಯನ್ನು ಕೊಂಡಾಡಿದ ಅವರು ಗ್ರಾಹಕರನ್ನು ಎಂದೂ ಸತಾಯಿಸಬೇಡಿ, ಇಂದಿನ ಕಾಲಕ್ಕೆ ಸರಿಯಾಗಿ ಕ್ರಿಯಾಶೀಲರಾಗಿ ಮುಂದುವರಿಯಿರಿ. ರಾಜ್ಯಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸಿರಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಉಡುಪಿ ಕ್ರೈಸ್ತ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಡಾ.ಜೆರಾಲ್ಡ್ ಐಸಾಕ್ ಲೋಬೊ, ರಜತ ಮಹೋತ್ಸವದ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಆಶೀರ್ವಚನ ನೀಡಿದರು. ಕುಂದಾಪುರ ವಲಯ ಪ್ರಧಾನ ಧರ್ಮಗುರು ರೆ.ಫಾ.ಅನಿಲ್ ಡಿಸೋಜ ಸಮಾರಂಭ ಉದ್ಘಾಟಿಸಿ ಶುಭ ಹಾರೈಸಿದರು. ಉಡುಪಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಪ್ರವೀಣ್ ನಾಯಕ್, ಕುಂದಾಪುರ ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಚಂದ್ರಪ್ರತಿಮಾ, ಕುಂದಾಪುರ ವಲಯ ಕೆಥೋಲಿಕ್ ಸಭಾ ಅಧ್ಯಕ್ಷ ಜೇಕಬ್ ಡಿ.ಸೋಜ, ಸೊಸೈಟಿಯ ಉಪಾಧ್ಯಕ್ಷ ಜಾನ್ ಮಿನೆಜಸ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಫಾಸ್ಕಲ್ ಡಿಸೋಜ, ನಿರ್ದೇಶಕರಾದ ಫಿಲಿಫ್ ಡಿಕೋಸ್ಟಾ, ಜೇಕಬ್ ಡಿಸೋಜ, ಕಿರಣ್ ಲೋಬೋ, ಮಾರ್ಟಿನ್ ಇ.ಡಾಯಸ್, ವಿನೋದ್ ಕ್ರಾಸ್ತಾ, ಜೆರಾಲ್ಡ್ ಕ್ರಾಸ್ತಾ, ಸ್ಟೇನಿ ಡಿಸೋಜ, ಡಾಯ್ನಾ ಡಿ. ಆಲ್ಮೇಡಾ, ಶಾಂತಿ ಆರ್.ಕಾರ್ವಾಲ್ಲೋ ಉಪಸ್ಥಿತರಿದ್ದರು. ಸಂಘದ ಪ್ರಥಮ ಸದಸ್ಯೆ ಲೀನಾ ಡಿಸೋಜ ಪಡುಕೋಣೆ, ಸೊಸೈಟಿಯ ಮಾಜಿ ಅಧ್ಯಕ್ಷರು, ಹಿರಿಯ ಗ್ರಾಹಕರು, ಮಾಜಿ ನಿರ್ದೇಶಕರು, ಹಾಲಿ ನಿರ್ದೇಶಕರು, ಸಂಘದ ಸ್ಥಾಪಕಾಧ್ಯಕ್ಷರ ಪರವಾಗಿ ಕಿರಣ್ ಲೋಬೋ, ಹಿರಿಯ ಸಹಕಾರಿ ಧುರೀಣ ವಲೇರಿಯನ್ ಮಿನೆಜಸ್, ಸಹಕಾರಿ ಸಂಘಗಳ ನಿಬಂಧಕರನ್ನು ಸನ್ಮಾನಿಸಲಾಯಿತು. ಸೊಸೈಟಿ ವತಿಯಿಂದ ಕುಂದಾಪುರ ಹೋಲಿ ರೋಜರಿ ಇಗರ್ಜಿಗೆ ಕಂಪ್ಯೂಟರ್ ಕೊಡುಗೆ ನೀಡಲಾಯಿತು.

ಸಂಘದ ಅಧ್ಯಕ್ಷ ಜಾನ್ಸನ್ ಡಿ ಆಲ್ಮೇಡಾ ಸ್ವಾಗತಿಸಿದರು. ಪತ್ರಕರ್ತ ಕೆ.ಸಿ.ರಾಜೇಶ್ ಡಾ.ಎಂ.ಎನ್.ರಾಜೇಂದ್ರ ಕುಮಾರರ ಅಭಿನಂದನಾ ಪತ್ರ ವಾಚಿಸಿದರು. ನಿವೃತ್ತ ಶಿಕ್ಷಕ ಲೂಯಿಸ್ ಜೆ.ಫೆರ್ನಾಂಡಿಸ್ ಕಾರ್ಯಕ್ರಮ ನಿರ್ವಹಿಸಿದರು. ಸಮಾರಂಭಕ್ಕೆ ಮೊದಲು ಉಡುಪಿ ಬಿಷಪ್ ಅವರಿಂದ ರಜತ ಮಹೋತ್ಸವ ಕೃತಜ್ಞತಾ ದಿವ್ಯ ಬಲಿಪೂಜೆ ಹೋಲಿ ರೋಜರಿ ಇಗರ್ಜಿಯಲ್ಲಿ ಜರುಗಿತು.

## ಕುಂದಾಪುರ ತಾಲೂಕು ವಿಭಜನೆ : ಮೂರು ತಾಲ್ಲೂಕು ಸೂಕ್ತ

ಕುಂದಾಪುರ ತಾಲ್ಲೂಕಿನ 101 ಗ್ರಾಮಗಳಲ್ಲಿ ಕೆಲವನ್ನು ಹೊಸ ಬೈಂದೂರು ತಾಲ್ಲೂಕಿಗೆ ಹಂಚುವ ಪ್ರಕ್ರಿಯೆಯಲ್ಲಿ ಉಂಟಾಗಿರುವ ಗೊಂದಲವನ್ನು ಪರಿಹರಿಸಲು ಜಿಲ್ಲಾಡಳಿತ ಪ್ರಯತ್ನಿಸುತ್ತಿದೆ ಎಂದು ಗೊತ್ತಾಗಿದೆ.

ಆದರೆ ಬೈಂದೂರು ತಾಲ್ಲೂಕಿಗೆ ವಂಡ್ಸೆ ಫಿರ್ಕಾದ ಗ್ರಾಮಗಳ ವಿರೋಧದ ಹಿನ್ನಲೆಯಲ್ಲಿ 28 ಗ್ರಾಮಗಳನ್ನು ಮಾತ್ರ ಮಂಜೂರು ಮಾಡುವ ಸರಕಾರದ ನಿರ್ಧಾರ ಅಂತಿಮಗೊಳಿಸುವ ಮೊದಲು ಕುಂದಾಪುರ ತಾಲ್ಲೂಕನ್ನು ಮೂರು ತಾಲ್ಲೂಕುಗಳನ್ನಾಗಿ ರೂಪಿಸುವ ಬಗ್ಗೆ ಚಿಂತಿಸಿ ನಿರ್ಧಾರ ಕೈಗೊಂಡರೆ ಸೂಕ್ತವಾಗುತ್ತದೆ. ಈಗ ಒಮ್ಮೆ 28 ಗ್ರಾಮಗಳ ಬೈಂದೂರು ತಾಲ್ಲೂಕು ರಚನೆಗೊಂಡರೆ ಮತ್ತೆ ಕುಂದಾಪುರ ತಾಲ್ಲೂಕು 69 ಗ್ರಾಮಗಳ ಒಂದು ತಾಲ್ಲೂಕು 28 ಗ್ರಾಮಗಳ ಇನ್ನೊಂದು ತಾಲ್ಲೂಕು ಆಗಿ ಅಸಮತೋಲನ ಉಂಟಾಗುತ್ತದೆ. ಸಂಪನ್ಮೂಲ ಒಂದೇ ರೀತಿ ಹಂಚಿಕೆಯಾದರೆ ಕುಂದಾಪುರಕ್ಕೆ ನಷ್ಟ ಆಗುತ್ತದೆ ಎಂಬ ಅಭಿಪ್ರಾಯವಿದೆ.

115 ಗ್ರಾಮಗಳ ಉಡುಪಿ ತಾಲ್ಲೂಕನ್ನು 3 ತಾಲ್ಲೂಕಾಗಿ ವಿಂಗಡಿಸಲಾಗುವುದು ಸಾಧ್ಯವಾಗುವುದಾದರೆ ಕುಂದಾಪುರ ತಾಲ್ಲೂಕನ್ನು ವಿಭಜಿಸಲು ಸಾಧ್ಯವಿಲ್ಲವೇಕೇ ಎಂಬ ಪ್ರಶ್ನೆಗೆ ಸರಕಾರ ಉತ್ತರಿಸಬೇಕಾಗುತ್ತದೆ.

(5ನೇ ಪುಟಕ್ಕೆ)

## ಪ್ರತಿಷ್ಠಿತ ಕ್ಲೈಮೇಟ್ ಕಂಟ್ರೋಲ್ ಅವಾರ್ಡ್ ಸಮಿತಿ ಸದಸ್ಯರಾಗಿ ಸತೀಶ ಶೆಟ್ಟಿ



ಮದ್ಯ ಪ್ರಾಚ್ಯದ ಪ್ರತಿಷ್ಠಿತ ಪ್ರಶಸ್ತಿ "ಕ್ಲೈಮೇಟ್ ಕಂಟ್ರೋಲ್ ಅವಾರ್ಡ್ 2017"ರ ಈ ಬಾರಿಯ ಆಯ್ಕೆ ಸಮಿತಿ ಸದಸ್ಯರಾಗಿ ಕಂದಾವರ ಸತೀಶ ಶೆಟ್ಟಿಯವರು ನಾಮ ನಿರ್ದೇಶನ ಹೊಂದಿದ್ದಾರೆ.

ಇತ್ತೀಚೆಗೆ ದುಬೈನಲ್ಲಿ "ಎನೋಕ್ ಎನರ್ಜಿ ಅವಾರ್ಡ್" ಪಡೆದಿರುವ ಸತೀಶ ಶೆಟ್ಟಿಯವರನ್ನು ಕ್ಲೈಮೇಟ್ ಕಂಟ್ರೋಲ್ ಅವಾರ್ಡ್" ಆಯ್ಕೆ ಸಮಿತಿಗೆ ನೇಮಿಸಿರುವುದು ಕುಂದಾಪುರಕ್ಕೆ ಹೆಮ್ಮೆಯ ವಿಷಯವಾಗಿದೆ.

ಈ ಪ್ರಶಸ್ತಿ ಪ್ರದಾನ ಸಮಾರಂಭ ಅಲಯಸ್ಯಾಟ್ ಬಾಲ್ರೂಮ್, ಅಲ್ ಮೂರೂಜ್ ರೋಟನ್, ದುಬೈನಲ್ಲಿ 27ನೇ ನವಂಬರ್‌ನಲ್ಲಿ ಯುಎಇ ಮಿನಿಸ್ಟ್ರಿ ಒಪ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ನ ಮಧ್ಯಸ್ಥಿಕೆಯಲ್ಲಿ ನಡೆಯಲಿದೆ.

ಮಧ್ಯಪ್ರಾಚ್ಯದ ಉತ್ಪಾದಕರು ಮತ್ತು ಉದ್ಯಮಿಗಳು ತಮ್ಮ ಉತ್ಪನ್ನದ ವಿಶೇಷತೆಯು ಹೇಗೆ ವಿಶ್ವದ ಹವಾಮಾನ ಬದಲಾವಣೆಗೆ ಮತ್ತು ಸುಸ್ಥಿರತೆಯಲ್ಲಿ ಇಡಲು ಕೆಲಸ ಮಾಡುತ್ತದೆ ಎನ್ನುವುದನ್ನು ಪ್ರದರ್ಶಿಸಬೇಕಾಗುತ್ತದೆ. ಸತೀಶ್ ಶೆಟ್ಟಿಯವರಿಗೆ ಸಿಕ್ಕ ಈ ಗೌರವಕ್ಕೆ ಹಲವಾರು ಗಣ್ಯರು ಅಭಿನಂದಿಸಿದ್ದಾರೆ.

